# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 841
ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು
ಉತ್ತರಿಸಬೇಕಾದ ದಿನಾಂಕ : 19.08.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿರುವ ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ಕಳೆದ 10 ವರ್ಷಗಳ ಅವಧಿಯಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿಗೆ ನೀಡಲಾಗಿರುವ ಸಾಲದ ಮೊತ್ತವೆಷ್ಟು; | ಕಳೆದ 10 ವರ್ಷಗಳಲ್ಲಿ ಹೊಸಕೋಟೆ ತಾಲ್ಲೂಕಿನಲ್ಲಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್‌ಶಾಖೆಯಿಂದ ಸ್ವಸಹಾಯ ಸಂಘಗಳಿಗೆ ಮಂಜೂರು ಮಾಡಲಾದ ಸಾಲದ ವಿವರ ಈ ಕೆಳಗಿನಂತಿದೆ.<br><br>ಕಳೆದ 10 ವರ್ಷಗಳಲ್ಲಿ ಮಂಜೂರಾದ ಮೊತ್ತ<br>ಒಟ್ಟು ಖಾತೆಗಳ ಸಂಖ್ಯೆ: 144<br>ಮೊತ್ತ (ಕೋಟಿಗಳಲ್ಲಿ): 4.31 |
| ಆ | 20 ವರ್ಷಗಳ ಬಳಿಕ ಪಡೆದ ಸಾಲಕ್ಕೆ ಸ್ತ್ರೀಶಕ್ತಿ ಸ್ವ-ಸಹಾಯ ಸಂಘದ ಸದಸ್ಯರು ಅಷ್ಟು ವರ್ಷದ ಬಡ್ಡಿ ಸೇರಿಸಿ ಹಣವನ್ನು ಕಟ್ಟಬೇಕೆಂದು ನೋಟಿಸ್ ನೀಡಲಾಗಿದೆಯೇ; ಹಾಗಿದ್ದಲ್ಲಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವೆಷ್ಟು; | ಹೌದು, ಬ್ಯಾಂಕಿನ ವಸೂಲಾತಿ ನೀತಿಯ ಪ್ರಕಾರ ಎಲ್ಲಾ ಅವಧಿ ಮೀರಿದ /NPA ಸಾಲಗಾರರಿಗೆ ನಿಯತಕಾಲಿಕವಾಗಿ ನೋಟಿಸ್‌ಗಳನ್ನು ನೀಡಲಾಗುತ್ತಿದ್ದು, ಅವರ ಖಾತೆಗಳನ್ನು ಕ್ರಮಬದ್ಧಗೊಳಿಸುವಂತೆ ವಿನಂತಿಸಲಾಗುತ್ತಿದೆ.<br>ಹೊಸಕೋಟೆ ತಾಲ್ಲೂಕಿನಲ್ಲಿ SHG ಅಡಿಯಲ್ಲಿ ಒಟ್ಟು NPA/ ಅವಧಿ ಮೀರಿದ 111 ಸಾಲದ ಖಾತೆಗಳಾಗಿದ್ದು, ಅವುಗಳ ಮೊತ್ತ ರೂ.3.69 ಕೋಟಿಗಳಾಗಿವೆ. |
| ಇ | 2013 ರಲ್ಲಿ ಸರ್ಕಾರ ರೈತರ ಮತ್ತು ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ ಸಾಲ ಮನ್ನಾ ಘೋಷಣೆ ಮಾಡಿರುವುದು ಇನ್ನು ಜಾರಿಗೆ ಬಂದಿಲ್ಲವೇ ಬಂದಿದ್ದರೆ ಪೂರ್ಣ ಮಾಹಿತಿ ಒದಗಿಸುವುದು. | ಕರ್ನಾಟಕ ಸರ್ಕಾರವು 2013 ರಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಅನ್ವಯವಾಗುವ ಸ್ವಸಹಾಯ ಸಂಘಗಳ ಯಾವುದೇ ಸಾಲ ಮನ್ನಾ ಯೋಜನೆಯನ್ನು ಘೋಷಿಸಿಲ್ಲ.<br><br>ರಾಜ್ಯದ ರೈತರು ಸಹಕಾರ ಸಂಘಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು ದಿ:20-6-2017 ಕ್ಕೆ ಇರುವ ಹೊರಬಾಕಿಯಲ್ಲಿ ಗರಿಷ್ಟ ರೂ.50,000 ಗಳವರೆಗಿನ ಸಾಲದ ಮೊತ್ತವನ್ನು ಸಂಪೂರ್ಣ ಮನ್ನಾ ಮಾಡಿ ಸರ್ಕಾರ ದಿ:23-06-2017 ರಂದು ಆದೇಶ ಹೊರಡಿಸಲಾಗಿತ್ತು.<br><br>ಈ ಯೋಜನೆಯಡಿಯಲ್ಲಿ 22.27 ಲಕ್ಷ ರೈತರು ರೂ.8,164.99 ಕೋಟಿಗಳ ಸಾಲ ಮನ್ನಾ ಪ್ರಯೋಜನ ಪಡೆದಿರುತ್ತಾರೆ.<br><br>ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿಗೆ ಇದುವರೆಗೆ ಯಾವುದೇ ಸಾಲ ಮನ್ನಾ ಯೋಜನೆ ಜಾರಿಗೆ ಬಂದಿರುವುದಿಲ್ಲ. ಆದರೆ ಕೋವಿಡ್ ಅವಧಿಯಲ್ಲಿ ದಿ:01-03-2021 ರಿಂದ ದಿ.30-06-2021 ರ ಅವಧಿಯಲ್ಲಿ ಸಹಕಾರ ಸಂಸ್ಥೆಗಳಲ್ಲಿ ಮರುಪಾವತಿಗೆ ಬರುವ ರೈತರ ಮತ್ತು |

| | | |
|---|---|---|
| | | ಸ್ವಸಹಾಯ ಗುಂಪುಗಳ ಸಾಲದ ಕಂತುಗಳ ಮರುಪಾವತಿ ಅವಧಿ ವಿಸ್ತರಣೆ ಮಾಡಿದ್ದು, ಈ ಯೋಜನೆಯಿಂದ 65,500 ಸ್ವಸಹಾಯ ಗುಂಪುಗಳಿಗೆ ಅನುಕೂಲವಾಗಿರುತ್ತದೆ. |
| ಈ | ರಾಜ್ಯದಲ್ಲಿ ಒಟ್ಟು ಎಷ್ಟು ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗಳಿವೆ; ಬೇರೆ ಜಿಲ್ಲೆಯಲ್ಲಿಯೂ ಇದೆ ರೀತಿಯ ನೋಟಿಸ್ ನೀಡಲಾಗುತಿದೆಯೇ; ಒಟ್ಟು ಎಷ್ಟು ಬಾಕಿ ಹಣ ವಸೂಲಿಯಾಗಬೇಕಾಗಿದೆ; | ಭಾರತ ಸರ್ಕಾರದ ದಿನಾಂಕ:07.04.2025ರ ಗೆಜೆಟ್ ಅಧಿಸೂಚನೆ ಸಂಖ್ಯೆ 1604ರ ಪ್ರಕಾರ 01.05.2025 ರಿಂದ ಜಾರಿಗೆ ಬರುವಂತೆ ಕರ್ನಾಟಕದ ಪ್ರಸ್ತುತ ಒಂದೆ ಕರ್ನಾಟಕ ಗ್ರಾಮೀಣ ಬ್ಯಾಂಕ್ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ 1751 ಶಾಖೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ.<br><br>ಹೌದು, ಬ್ಯಾಂಕ್ ಸೇವೆ ಸಲ್ಲಿಸುತ್ತಿರುವ ಎಲ್ಲಾ ಜಿಲ್ಲೆಗಳಲ್ಲಿ ಅವಧಿ ಮೀರಿದ/NPA ಸಾಲದ ಖಾತೆಗಳನ್ನು ವಸೂಲಿ ಮಾಡಲು ಬ್ಯಾಂಕಿನ ವಸೂಲಾತಿ ನೀತಿಯ ಪ್ರಕಾರ ನೋಟೀಸ್ ನೀಡಲಾಗುತ್ತಿದೆ.<br><br>ಬ್ಯಾಂಕ್ 1.42 ಲಕ್ಷಕ್ಕೂ ಹೆಚ್ಚು ಸ್ವಸಹಾಯ ಗುಂಪು/ಜೆಎಲ್‌ಜಿ ಗುಂಪುಗಳಿಗೆ ಸಾಲ ಲಿಂಕ್ ಮಾಡಿದೆ ಮತ್ತು ಸುಮಾರು ರೂ.4000 ಕೋಟಿ ಸಾಲವನ್ನು ಹೊಂದಿದೆ, ಆ ಸಾಲದಲ್ಲಿ, ಸುಮಾರು 415 ಕೋಟಿಗಳು ಎನ್‌ಪಿಎಗಳಾಗಿವೆ. |
| ಉ | ರಾಜ್ಯದಲ್ಲಿರುವ ಡಿಸಿಸಿ ಬ್ಯಾಂಕ್‌ಗಳನ್ನು ಸೇರಿಸಿಕೊಂಡು ಎಲ್ಲಾ ಸಹಕಾರಿ ಬ್ಯಾಂಕ್‌ನಲ್ಲಿಯೂ ಸಹ ಇದೇ ರೀತಿಯಾಗಿ ಬಾಕಿ ವಸೂಲಿ ಮಾಡಲಾಗುತ್ತಿದೆಯೇ; | ಡಿಸಿಸಿ ಬ್ಯಾಂಕ್‌ಗಳಲ್ಲಿ 20 ವರ್ಷದ ಹಳೆಯ ಸಾಲಗಳ ವಸೂಲಾತಿಗೆ ನೋಟೀಸ್ ನೀಡುತ್ತಿರುವ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.<br><br>ಆದಾಗ್ಯೂ ಇತ್ತೀಚಿನ ವರ್ಷಗಳಲ್ಲಿ ಡಿಸಿಸಿ ಬ್ಯಾಂಕ್ ಗಳಲ್ಲಿ ಸಾಲ ಪಡೆದು ದಿ.31-07-2025 ರ ಅಂತ್ಯಕ್ಕೆ 70,143 ಸ್ವಸಹಾಯ ಗುಂಪುಗಳಿಂದ ರೂ.1515.33 ಕೋಟಿ ಸಾಲದ ಹೊರಬಾಕಿ ಇದ್ದು, ಈ ಪೈಕಿ 24,425 ಸ್ವಸಹಾಯ ಗುಂಪುಗಳಿಂದ ರೂ.235.24 ಕೋಟಿ ಅಸಲು ಮತ್ತು ರೂ.57.59 ಕೋಟಿ ಬಡ್ಡಿ ಸುಸ್ತಿಯಾಗಿದ್ದು, 2017 ರ ಸ್ವಸಹಾಯ ಗುಂಪುಗಳಿಗೆ ಮಾತ್ರ ಸಾಲ ವಸೂಲಾತಿಗೆ ನೋಟೀಸ್ ನೀಡಿ, ವಸೂಲಾತಿ ಕ್ರಮ ಕೈಗೊಳ್ಳಲಾಗಿದೆ. |

**FD 62 CIF 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ.